# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಮತ್ತು ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ದ.ಕ. ಮಂಗಳೂರು

| | | |
|---|---|---|
| **ಸ್ಪೆಷಲ್ ಕೇಸ್ ನಂಃ 113/23** | **ಚಾಸಾಃ 1** | **ಪ್ರಾಸಾಃ 1** |

| | |
|---|---|
| **ಸಾಕ್ಷಿದಾರರ ಹೆಸರುಃ** | ರಾಜೇಶ |
| **ತಂದೆಯ ಹೆಸರುಃ** | ರಾಜಪ್ಪ |
| **ಪ್ರಾಯಃ** | 50 ವರ್ಷ |
| **ಉದ್ಯೋಗಃ** | ಕೂಲಿ ಕೆಲಸ |
| **ವಾಸ ಸ್ಥಳಃ** | ಬೀಯಪಾದೆ ಮನೆ, ಸರಪಾಡಿ ಗ್ರಾಮ, ಬಂಟ್ವಾಳ ತಾ. |
| **ದಿಃ 07.10.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು** | |

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

ಚಾಸಾ–2 ಗುಲಾಬಿ ನನ್ನ ಹೆಂಡತಿ. ಚಾಸಾ–3 ರಿಂದ ಚಾಸಾ–5 ನನ್ನ ನೆರೆ ಕೆರೆಯವರು. ಚಾಸಾ–6 ರಿಂದ ಚಾಸಾ–8 ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ 1, 2, 4 ರಿಂದ 8 ಆರೋಪಿತರ ಪರಿಚಯ ಇದೆ. ತೀರಿ ಹೋದ ಈ ಪ್ರಕರಣದ 3 ನೇ ಆರೋಪಿಯ ಪರಿಚಯ ಇದೆ. ನಾವು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಗೆ ಸೇರಿದವರು. ನಾವು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜಾತಿಗೆ ಸೇರಿರುವ ವಿಷಯ 1, 2, 4 ರಿಂದ 8 ಆರೋಪಿತರಿಗೆ ಗೊತ್ತಿದೆ.

2. ನಾವು ವಾಸಿಸುತ್ತಿರುವ ಜಾಗ ನನ್ನ ಹೆಂಡತಿ ಚಾಸಾ–2 ಗುಲಾಬಿ ಕಡೆಯಿಂದ ಬಂದಿದ್ದು ಸದರಿ ಜಾಗದಲ್ಲಿ ನಾವು ಕೃಷಿ ಮಾಡುತ್ತೇವೆ. ನನ್ನ ಹೆಂಡತಿ ಚಾಸಾ–2 ಗುಲಾಬಿಗೆ ಬಂದ ಜಾಗದ ಪಕ್ಕದಲ್ಲಿ ಸ್ವಲ್ಪ ಕುಂಮ್ಕಿ ಜಾಗ ಇತ್ತು ಸದರಿ ಜಾಗವನ್ನು ನಾವು ಉಪಯೋಗಿಸುತ್ತಿದ್ದೆವು. ಈ ಪ್ರಕರಣದ ಆರೋಪಿತರು ನನಗೆ ಮತ್ತು ನನ್ನ ಹೆಂಡತಿ ಚಾಸಾ–2 ಗುಲಾಬಿಗೆ ತೊಂದರೆ ಮಾಡಿದ್ದಾರೆ.

3. ಎರಡು ವರ್ಷದ ಹಿಂದೆ ದೀಪಾವಳಿ ಹಬ್ಬದ ಸಮಯ ರಾತ್ರಿ 8.30 ಗಂಟೆಗೆ ನಾನು ಮತ್ತು ನನ್ನ ಹೆಂಡತಿ ಚಾಸಾ–2 ಗುಲಾಬಿ ನಮ್ಮ ಮನೆಯಲ್ಲಿದ್ದೆವು ಮತ್ತು ನಮ್ಮ ಮನೆಯ ಬಾಗಿಲು ಹಾಕಿದ್ದು ಈ

ಪ್ರಕರಣದ ಆರೋಪಿತರು ನಮ್ಮ ಮನೆಗೆ ಬಂದು ಬಾಗಿಲು ಬಡಿದರು, ಅರೋಪಿತರು ನಮ್ಮ ಮನೆಗೆ ಬರುವಾಗ ಅವರ ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಬಂದಿದ್ದರು. ನಾನು ಬಾಗಿಲನ್ನು ತೆಗೆದ ಕೂಡಲೇ ಆರೋಪಿತರು ಒಳಗೆ ನುಗ್ಗಿ ನನ್ನ ತಲೆಗೆ, ಎರಡು ಕೈ ಗಳಿಗೆ ಮತ್ತು ಭುಜಗಳಿಗೆ, ಎಡ ಕೈ ಮೊಣ ಕೈ ಗೆ, ಎರಡೂ ಕಾಲುಗಳಿಗೆ ಹೊಡೆದರು. ನಮ್ಮ ಮನೆಯ ಪಕ್ಕದಲ್ಲಿ ಇದ್ದ ಕುಂಮ್ಕಿ ಜಾಗದಲ್ಲಿ ನಾವು ಅಡಿಕೆ ಗಿಡಗಳನ್ನು ನೆಟ್ಟಿದ್ದು ಅದನ್ನು ಯಾರೋ ಕಿತ್ತು ಹಾಕಿದ್ದು ಆರೋಪಿತರು ನಾವು ಅಡಿಕೆ ಗಿಡಗಳನ್ನು ಕಿತ್ತು ಹಾಕಿದ್ದೇವೆ ಎಂದು ಬಾವಿಸಿ ನಮ್ಮ ಮನೆಗೆ ಬಂದು ಹೊಡೆದಿದ್ದಾರೆ.

4. ನನ್ನ ಜೊತೆ ನನ್ನ ಹೆಂಡತಿ ಚಾಸಾ–2 ಗುಲಾಬಿಗೂ ಕೂಡ ಆರೋಪಿತರು ಹೊಡೆದರು. ಆರೋಪಿತರು ಹೊಡೆದಿದ್ದರಿಂದ ಚಾಸಾ–2 ಅವರ ಬಲ ಕೈ ಮುರಿದಿದೆ ಹಾಗೂ ಎರಡು ಹಲ್ಲುಗಳು ಮುರಿದು ಹೋಗಿದೆ. ನಮ್ಮ ಮನೆಗೆ ಎರಡು ಬಾಗಿಲು ಇದೆ, ಒಂದು ಮುಂಬಾಗಿಲು ಇನ್ನೊಂದು ಹಿಂಬಾಗಿಲು.

5. ನನಗೆ ಮೊದಲು ಹಲ್ಲೆ ಆರೋಪಿತರಾದ ವಿನೋದ, ನಿತೇಶ್ ಯಾನೆ ಕುಟ್ಟ, ಕೃಷ್ಣಪ್ಪ, ಜಯಂತಿ ಮಾಡಿದರು. ನನಗೆ ಹೊಡೆಯುವಾಗ ನನ್ನ ಹೆಂಡತಿ ಚಾಸಾ–2 ಗುಲಾಬಿ ಜೋರಾಗಿ ಕೂಗಿಕೊಂಡರು ಆದರೆ ಆರೊಪಿತರು ಅವರನ್ನು ಹೊರಗೆ ಹೋಗಲು ಬಿಡದೆ ನಮ್ಮ ಮನೆಯ ಬಾಗಿಲನ್ನು ಹೊರಗಿನಿಂದ ಹಾಕಿದ್ದರು. ಆರೋಪಿ ಗುಲಾಬಿ ಮತ್ತು ರುಕ್ಮಿಣಿ ನಮ್ಮ ಮನೆಯ ಹಿಂದಿನ ಬಾಗಿಲನ್ನು ಹೊರಗಿನಿಂದ ಹಾಕಿದ್ದರು. ಆರೋಪಿತರು ನಮ್ಮನ್ನು ಕೊಲ್ಲುವ ಉದ್ದೇಶದಿಂದ ಈ ರೀತಿ ನಮಗೆ ಹಲ್ಲೆ ಮಾಡಿದ್ದಾರೆ.

6. ನನಗೆ ಆರೋಪಿತರು ಹಲ್ಲೆ ಮಾಡಿ ನನ್ನ ಮನೆಯಿಂದ ಹೊರಗೆ ನನ್ನನ್ನು ಬಿಸಾಡಿದರು. ನಮ್ಮ ಮನೆಯ ಹತ್ತಿರದವರ್ಯಾರು ಘಟನೆ ಸಮಯ ಬರಲಿಲ್ಲ. ನನ್ನನ್ನು ಮನೆಯಿಂದ ಬಿಸಾಡಿ ಆರೋಪಿತರು ಸೀದಾ ಹೋದರು. ಮರದ ದೊಣ್ಣೆಗಳು ನಮ್ಮ ಮನೆಯ ಹತ್ತಿರ ಬಿಸಾಡಿದರು. ನನಗೆ ಆರೋಪಿತರು ಹಲ್ಲೆ ಮಾಡಿದ್ದರಿಂದ ನಾನು ಜೋರಾಗಿ ಕೂಗಿಕೊಂಡೆ. ನನ್ನನ್ನು ಆರೋಪಿತರು ಮನೆಯಿಂದ ಬಿಸಾಡಿದ ಮೇಲೆ ನಮ್ಮ ಮನೆಯ ನೆರೆ ಕೆರೆಯವರಾದ ಚಾಸಾ–3 ನಾಗಮ್ಮ ಚಾಸಾ–4 ಪೂವಪ್ಪ ಚಾಸಾ–5 ಕೃಷ್ಣಪ್ಪ ನಮ್ಮ

ಮನೆಗೆ ಬಂದು 108 ambulance ಗೆ ಕರೆ ಮಾಡಿದರು. Ambulance ನಮ್ಮ ಮನೆಯ ಬಳಿ ಬಂದು ನಮ್ಮನ್ನು ಚಾಸಾ–3 ರಿಂದ 5 ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ನನ್ನ ಹೆಂಡತಿ ಚಾಸಾ–2 ಗುಲಾಬಿಯನ್ನು ಮಹಿಳಾ ವಾರ್ಡ್ ಗೆ ದಾಖಲಿಸಿದರು ನನ್ನು ಪುರುಷರ ವಾರ್ಡ್ ಗೆ ದಾಖಲಿಸಿದರು.

7. ನಾನು ಮತ್ತು ನನ್ನ ಹೆಂಡತಿ ಚಾಸಾ–2 ಗುಲಾಬಿ ಆಸ್ಪತ್ರೆಯಲ್ಲಿ ಇದ್ದಾಗ ವಿಚಾರಿಸಲು ಪೊಲೀಸರು ಬಂದಿದ್ದು ನಮ್ಮನ್ನು ವಿಚಾರಿಸಿ ಹೇಳಿಕೆಯನ್ನು ದಾಖಲಿಸಿಕೊಂಡರು ಮತ್ತು ನಾನು ನನ್ನ ಹೇಳಿಕೆಗೆ ಸಹಿ ಮಾಡಿದ್ದೇನೆ. ಸಾಕ್ಷಿ ಕಡತದಲ್ಲಿ ಇರುವ ಪಿರ್ಯಾದು ಹೇಳಿಕೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಪಿರ್ಯಾದನ್ನು ನಿಪಿ–1, ಸಾಕ್ಷಿ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ನಾನು ಆಸ್ಪತ್ರೆಯಲ್ಲಿ 19 ದಿನ ಒಳರೋಗಿಯಾಗಿ ದಾಖಲಾಗಿದ್ದೆ. ನನ್ನ ಮೂಳೆ ಮುರಿತಕ್ಕೆ ವೈಧ್ಯರು ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ನನ್ನ ಹೆಂಡತಿ ಚಾಸಾ–2 ಗುಲಾಬಿ ಕೂಡ ಆಸ್ಪತ್ರೆಯಲ್ಲಿ 19 ದಿನ ಒಳರೋಗಿಯಾಗಿ ದಾಖಲಾಗಿದ್ದರು.

8. ಆರೋಪಿತರು ಹೊಡೆದಿದ್ದರಿಂದ ನಮಗೆ ರಕ್ತ ಬಂದಿದ್ದು ಸದರಿ ರಕ್ತ ನಾವು ಧರಿಸಿದ್ದ ಬಟ್ಟೆಗೆ ರಕ್ತ ತಾಗಿತ್ತು. ರಕ್ತ ತಾಗಿದ್ದ ನನ್ನ ಮತ್ತು ನನ್ನ ಹೆಂಡತಿ ಚಾಸಾ–2 ಗುಲಾಬಿ ಬಟ್ಟೆಯನ್ನು ಪೊಲೀಸರಿಗೆ ಆಸ್ಪತ್ರೆಯಲ್ಲೆ ಪೊಲೀಸರಿಗೆ ಕೊಟ್ಟಿದ್ದೇವೆ. ಸದರಿ ಬಟ್ಟೆಗಳನ್ನು ಮತ್ತು ದೊಣೆಗಳನ್ನು ನೋಡಿದರೆ ಗುರುತಿಸಬಲ್ಲೆ. ಬಿಳಿ ಬಟ್ಟೆಯಿಂದ ಸುತ್ತಿ ಅರಗು ಸೀಲ್ ಹಾಕಿ ಪ್ಯಾಕ್ ಮಾಡಿದ್ದ ಪೊಟ್ಟಣವನ್ನು ತೆರೆದಾಗ ಅದರಲ್ಲಿ ನಾಲ್ಕು ಮರದ ಸೊಂಟೆ ಇದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮರದ ಸೊಂಟೆಗಳನ್ನು ಮು.ಮಾ–1 ರಿಂದ 4 ಎಂದು ಗುರುತಿಸಲಾಯಿತು. ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಪೊಲೀಸರು ತಕ್ಷೀರು ಸ್ಥಳಕ್ಕೆ ಬಂದು ಸ್ಥಳವನ್ನು ನೋಡಿ ಮಹಜರ್ ತಯಾರಿಸಿ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿ ತಕ್ಷೀರು ಸ್ಥಳ ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ತಕ್ಷೀರು ಸ್ಥಳ ಮಹಜರ್ ನ್ನು ನಿಪಿ–2, ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

9. ಆರೋಪಿತರು ನನಗೆ ಮತ್ತು ನನ್ನ ಹೆಂಡತಿ ಚಾಸಾ-2 ಗುಲಾಬಿಗೆ ಮು.ಮಾ-1 ರಿಂದ 4 ಮರದ ಸೊಂಟೆಯಲ್ಲಿ ಹೊಡೆದಾಗ ರಕ್ತ ಮು.ಮಾ-1 ರಿಂದ 4 ಮರದ ಸೊಂಟೆಗೆ ತಾಗಿತ್ತು . ಸಾಕ್ಷಿ ಕಡತದಲ್ಲಿ ಇರುವ ಎರಡು ನಕಾಶೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಕರಡು ನಕಾಶೆಯನ್ನು ನಿಪಿ-3, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಕಡತದಲ್ಲಿ ಇರುವ ಎರಡು ಛಾಯ ಚಿತ್ರ ಮತ್ತು ಒಂದು ಛಾಯ ಚಿತ್ರದಲ್ಲಿ ಇರುವ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಛಾಯ ಚಿತ್ರವನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-5 ಛಾಯ ಚಿತ್ರವನ್ನು ನೋಡಿ ತನ್ನ ಮನೆಯ ಒಳಗಿನ ಚಿತ್ರಣ ಎಂದು ನುಡಿದಿರುತ್ತಾರೆ.

10. ಆರೋಪಿತರು ನನಗೆ ಮತ್ತು ನನ್ನ ಹೆಂಡತಿ ಚಾಸ-2 ಗುಲಾಬಿ ಗೆ ಹೊಡೆಯುವಾಗ ಏನು ಹೇಳಿಲ್ಲ. ಮನೆಯ ಹತ್ತಿರ ಬಂದು ಕೊಂದು ಹಾಕುತ್ತೇವೆ ಎಂದು ಆರೋಪಿತರು ನನಗೆ ಹೆದರಿಸಿದ್ದಾರೆ. ಆರೋಪಿತರು "ನನಗೆ ಬೋಳಿ ಮನಗೆ ನೀನು ಅಲ್ಲಿಂದ ಬಂದವನು ಇಲ್ಲಿಂದ ಬಂದವನು ನಿನಗೆ ಸಾಯಿಸುತ್ತೇವೆ" ಎಂದು ಬೈದಿದ್ದಾರೆ.

11. ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿದ ಪೊಟ್ಟಣವನ್ನು ತೆರೆದಾಗ ಅದರಲ್ಲಿ ಇದ್ದ ಬರ್ಮುಡಾವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಬರ್ಮುಡಾವನ್ನು ಮು.ಮಾ-5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಬಿಳಿ ಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿದ ಇನ್ನೊಂದು ಪೊಟ್ಟಣವನ್ನು ತೋರಿಸಿದಾಗ ಅದರಲ್ಲಿ ನೈಟಿ ಇದ್ದು ಅದು ತನ್ನ ಹೆಂಡತಿ ಚಾಸಾ-2 ಗುಲಾಬಿಯ ನೈಟಿ ಎಂದು ಸಾಕ್ಷಿ ಗುರುತಿಸಿದ್ದು ಸದರಿ ನೈಟಿಯನ್ನು ಮು.ಮಾ-6 ಎಂದು ಗುರುತಿಸಲಾಯಿತು.

12. ನಾನು ಮತ್ತು ನನ್ನ ಹೆಂಡತಿ ಚಾಸಾ-2 ಗುಲಾಬಿ ವಾಸಿಸುತ್ತಿರುವ ಮನೆಗೆ ಸಂಬಂಧಪಟ್ಟಂತೆ ದಾಖಲೆಗಳು ಇದೆ ಎಂದು ನಮ್ಮ ಮನೆಗೆ ಸಂಬಂಧಿಸಿದ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿದ್ದೇನೆ. ಸಾಕ್ಷಿ ಕಡತದಲ್ಲಿ ಇರುವ ಸ್ವತ್ತು ಸ್ವಾಧೀನತ ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ನ್ನು ನಿಪಿ-6, ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿ ಇರುವ ಮೆಸ್ಕಾಂ electricity ಬಿಲ್, ರಶೀದಿ, ಹಾಗೂ ಆರ್.ಟಿ.ಸಿ ನ್ನು ನೋಡಿ

ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-7 ರಿಂದ ನಿಪಿ-9 ಎಂದು ಕ್ರಮವಾಗಿ ಗುರುತಿಸಲಾಯಿತು. ಪ್ರಕರಣದ ಘಟನೆಗಿಂತ ಮೊದಲು ನಾನು ಮತ್ತು ನನ್ನ ಹೆಂಡತಿ ಚಾಸಾ-2 ಗುಲಾಬಿ ನಮ್ಮ ಬಂಗಾರವನ್ನು ಬ್ಯಾಂಕ್ ನಲ್ಲಿ ಅಡ ಇಟ್ಟಿದ್ದು ಬಂಗಾರ ಅಡಮಾನ ಮಾಡಿದ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ನಾನು ಕೊಟ್ಟಿದ್ದೇನೆ. ಸಾಕ್ಷಿ ಕಡತದಲ್ಲಿ ಇರುವ ಬ್ಯಾಂಕ್ ನಲ್ಲಿ ಅಡ ಇಟ್ಟ ಆಭರಣಗಳ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-10 ಮತ್ತು ನಿಪಿ-11 ಎಂದು ಕ್ರಮವಾಗಿ ಗುರುತಿಸಲಾಯಿತು.

13. ಆರೋಪಿತರಾದ ರುಕ್ಮಿಣಿ ಮತ್ತು ಗುಲಾಬಿ ನಮ್ಮ ಮನೆಯ ಹಿಂದಿನ ಬಾಗಿಲನ್ನು ಹೊರಗಡೆಯಿಂದ ಹಾಕಿದ್ದು "ನಿನ್ನನ್ನು ಹೊರಗಡೆ ಬಿಡುವುದಿಲ್ಲ ನೀನು ಹೊರಗೆ ಬಂದರೆ ನಿನ್ನನ್ನು ಕೊಚ್ಚುತ್ತೇವೆ" ಎಂದು ನನಗೆ ಹೇಳಿದರು.

14. ಆರೋಪಿತರು ನನಗೆ "ನಾಯಿದ ಮನಗೆ, ಅಂತದ್ದು ಇಂತದ್ದು" ಎಂದು ಬೈದರು. ಆರೋಪಿತರು ಅಲಸಂದೆ ಹಾಕುತ್ತೇವೆ ನಮಗೆ ಕುಂಮ್ಕಿ ಜಾಗ ಕೊಡಿ ಎಂದು ಕೇಳಿದರು ಅದಕ್ಕೆ ನಾನು ಆಯಿತು ಬೆಳೆದುಕೊಳ್ಳಿ ಎಂದು ಹೇಳಿದ್ದೆ. ನಮ್ಮ ಜಾಗದಲ್ಲಿ ನಾವು ಮತ್ತು ಆರೋಪಿತರು ಒಟ್ಟಿಗೆ ಸೇರಿ ಅಡಿಕೆ ಸಸಿಗಳನ್ನು ನೆಟ್ಟಿದ್ದೆವು ಯಾರೋ ಬಂದು ಅಡಿಕೆ ಸಸಿಗಳನ್ನು ಕಡಿದು ಹಾಕಿದ್ದಕ್ಕೆ ಆರೋಪಿತರು ನಾವು ಅಡಿಕೆ ಗಿಡಗಳನ್ನು ಕಡಿದು ಹಾಕಿದ್ದೇವೆ ಎಂದು ಆರೋಪಿಸಿ ಈ ಪ್ರಕರಣದ ಘಟನೆಯನ್ನು ಮಾಡಿದ್ದಾರೆ. ನನ್ನ ಹೆಂಡತಿ ಚಾಸಾ-2 ಗುಲಾಬಿಗೆ ಹಲ್ಲೆಯಿಂದ ಮೇಲುಗಡೆ ಹಲ್ಲು ಮುರಿದು ಹೋಗಿದೆ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ**

ಆರೋಪಿತರು ನಮಗೆ ಹಲ್ಲೆ ಮಾಡುವಾಗ ತೀರಿ ಹೋದ 3 ನೇ ಆರೋಪಿ ಮತ್ತು ಅವನ ತಾಯಿ ಜಯಂತಿ ನನ್ನನ್ನು ಮತ್ತು ನನ್ನ ಹೆಂಡತಿ ಚಾಸಾ-2 ಗುಲಾಬಿಯನ್ನು ಉದ್ದೇಶಿಸಿ "ಬೇರ್ವಸಿಗಳೆ ನಮ್ಮ ಕೃಷಿ ಜಾಗದಲ್ಲಿ ಬೆಳೆದ ಅಡಿಕೆಗಳನ್ನು ಇನ್ನೊಂದು ಬಾರಿ ತುಂಡು ಮಾಡಿದರೆ ಅದೇ ರೀತಿ ನಿಮ್ಮನ್ನು ಕಡಿದು ಕೊಲ್ಲುತ್ತೇವೆ" ಎಂದು ಬೈದು ಬೆದರಿಕೆಯೊಡ್ಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ 1, 2, 4 ರಿಂದ 7 ಮತ್ತು 9 ಮತ್ತು 10 ನೇ ಆರೋಪಿ ಪರ ಶ್ರೀಮತಿ ಎಂ.ಕೆ ವಕೀಲರಿಂದ**

ತಕ್ಷೀರು ಸ್ಥಳದ ಮನೆಯಲ್ಲಿ ನಾವು 18–20 ವರ್ಷದಿಂದ ವಾಸ ಮಾಡುತ್ತಿದ್ದೇವೆ. ನಮಗೆ ಕುಂಮ್ಕಿ ಮತ್ತು ವರ್ಗ ಜಾಗ ಸೇರಿ ಒಟ್ಟು 89 ಸೆಂಟ್ಸ್ ಜಾಗ ಇದೆ. ಸದರಿ ಜಾಗದಲ್ಲಿ ಎರಡು ಮನೆಗಳು ಇದ್ದು ಒಂದು ಮನೆ ಶೀಟ್ ನ ಮನೆ ಮತ್ತು ಇನ್ನೊಂದು ಹೆಂಚಿನ ಮನೆಯಾಗಿದ್ದು ಎರಡೂ ಮನೆಗಳು ಹತ್ತಿರದಲ್ಲೇ ಇದೆ. ನಮ್ಮ ಮನೆಗೆ ಕಾಂಪೌಂಡ್ ಇಲ್ಲ. ನಮ್ಮ ಮನೆಗೆ ಮುಂದೆ ಬಾಗಿಲು ಮತ್ತು ಕಿಟಕಿ ಇದೆ.

2. ನಡೆಯಲಾಗಿದೆ ಎಂದು ಹೇಳುವ ಘಟನೆಯ ಸಮಯ ನಾವು ಮನೆಯ ಬಾಗಿಲನ್ನು ಹಾಕಿ ಮನೆಯ ಒಳಗೆ ಇದ್ದೆವು. ಆ ಸಮಯ ನಾವಿಬ್ಬರು ಮಾತ್ರ ಮನೆಯಲ್ಲಿ ಇದ್ದೆವು. ಆರೋಪಿತರು ಆ ದಿನ ನಮ್ಮ ಮನೆಗೆ ಬಲಗಡೆಯಿಂದ ಬಂದರು. ಆರೋಪಿತರು ಬಂದಾಗ ನಮ್ಮ ಮನೆಯ ಒಳಗೆ ಚಿಲಕ ಹಾಕಿ ನಾವು ಒಳಗೆ ಇದ್ದೆವು. ಆರೋಪಿತರು ನಮ್ಮ ಮನೆಯ ಬಾಗಿಲನ್ನು ತಟ್ಟಿದರು ಯಾರೋ ಬಂದಿದ್ದಾರೆ ಎಂದು ನಾನು ಬಾಗಿಲು ತೆಗೆದೆ, ಕೂಡಲೇ ಆರೋಪಿತರು ಹಲ್ಲೆ ಮಾಡಿದರು. ನಾನು ಬಾಗಿಲನ್ನು ತೆಗೆಯುವಾಗ ಯಾರು ಬಂದಿದ್ದಾರೆ ಎಂದು ಕೇಳಲಿಲ್ಲ.

3. ಪ್ರಥಮವಾಗಿ ಆ ದಿನ ನಾನು 3 ನೇ ಆರೋಪಿ ಮೃತ ವಿನೋದ್ ನನ್ನು ನೋಡಿದೆ. 1 ನೇ ಆರೋಪಿ ಕೃಷ್ಣಪ್ಪ ನಾಯಕ್ ಮನೆ ನಮ್ಮ ಮನೆಯಿಂದ ಅರ್ಧ ಕಿ.ಮೀ ದೂರದಲ್ಲಿ ಇದೆ. ಚಾಸಾ–3 ನಾಗಮ್ಮ ಅವರ ಮನೆ ನಮ್ಮ ತೋಟದ ಬೇಲಿಯ ಹಿಂಭಾಗದಲ್ಲಿ ಇದೆ. ನಮ್ಮ ಮನೆಯಿಂದ ಸುಮಾರು 10 ಅಡಿ ದೂರದಲ್ಲಿ ಚಾಸಾ–3 ನಾಗಮ್ಮ ಅವರ ಮನೆ ಇದೆ. ಕುಂಮ್ಕಿ ಜಾಗದಲ್ಲಿ ನಾವು ಮತ್ತು ಆರೋಪಿ ಒಟ್ಟಿಗೆ ಅಡಿಕೆ ಗಿಡ ನೆಟ್ಟಿದ್ದೇವೆ, ಪ್ರತ್ಯೇಕವಾಗಿ ಅಡಿಕೆ ಗಿಡಗಳನ್ನು ನೆಟ್ಟಿಲ್ಲ. ನಾನು ಮತ್ತು ಆರೋಪಿ ಅಡಿಕೆ ಸಸಿಗಳನ್ನು ನೆಟ್ಟು 6 ತಿಂಗಳು ಆಗಿತ್ತು. ಸುಮಾರು 300 ಅಡಿಕೆ ಸಸಿಗಳನ್ನು ನೆಟ್ಟಿದ್ದೆವು. ಸುಮಾರು ಎಷ್ಟು ಅಡಿಕೆ ಗಿಡಗಳನ್ನು ಕಡಿದಿದ್ದರು ಎಂದು ನಾನು ಇಲ್ಲಿಯವರೆಗೂ ಹೋಗಿ ನೋಡಿಲ್ಲ. ಘಟನೆಯ ನಂತರ ಇಲ್ಲಿಯವರೆಗೂ ಎಷ್ಟು ಅಡಿಕೆ ಗಿಡಗಳನ್ನು ಕಡಿದಿದ್ದಾರೆ ಎಂದು ನಾನು ನೋಡಿಲ್ಲ.

4. ಪ್ರಥಮವಾಗಿ ನನ್ನ ತಲೆಗೆ ಪೆಟ್ಟು ಬಿತ್ತು, ಒಟ್ಟು 9 ಕ್ಕಿಂತ ಹೆಚ್ಚು ಗಾಯಗಳನ್ನು ಆರೋಪಿತರು ಹಲ್ಲೆಯಿಂದ ಮಾಡಿದ್ದಾರೆ. ಆರೋಪಿತರು ಮಾಡಿದ ಹಲ್ಲೆಯಿಂದ ನನಗೆ ರಕ್ತ ಬರುವ ಗಾಯಗಳು ಆಗಿದೆ. ಒಂಬತ್ತು ಗಾಯಗಳಿಂದಲೂ ನನಗೆ ರಕ್ತ ಬರುತ್ತಿತ್ತು. ನನ್ನನ್ನು ಕೆಳಗೆ ದೂಡಿ ಎಲ್ಲಾ ಆರೋಪಿತರು ತುಳಿದರು, ಎಲ್ಲರೂ ಒಟ್ಟಿಗೆ ಹಲ್ಲೆ ಮಾಡುತ್ತಿದ್ದರಿಂದ ಯಾರ್ಯಾರು ಎಷ್ಟು ಎಷ್ಟು ಹಲ್ಲೆ ಮಾಡಿದ್ದಾರೆ ಎಂದು ಹೇಳಲು ಆಗುವುದಿಲ್ಲ. ನನ್ನ ಕೈ ಗಳಿಗೆ ಬೆರಳನ್ನು ಸೇರಿಸಿ ಬ್ಯಾಂಡೇಜ್ ಹಾಕಿದ್ದರು. ತಲೆಗೆ, ತೊಡೆಗೆ ಹಾಗೂ ಎಲ್ಲಾ ಗಾಯಗಳಿಗೂ ಬ್ಯಾಂಡೇಜ್ ಹಾಕಿದ್ದರು. ನಾನು 19 ದಿನ ಒಳರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಆಸ್ಪತ್ರೆಯಿಂದ ಬಿಡುಗಡೆಯಾಗಿ ಒಂದು ವಾರದ ನಂತರ ಬ್ಯಾಂಡೇಜ್ ನ್ನು ತೆಗೆದಿದ್ದಾರೆ.

5. ನನಗೆ ಹಲ್ಲೆಯನ್ನು ಮರದ ದೊಣ್ಣೆಯಿಂದ ಮಾಡಿದ್ದಾರೆ. ಅದೇ ದಿನ ಮರದ ದೊಣ್ಣೆಗೆ ರಕ್ತ ತಾಗಿದ್ದನ್ನು ನಾನು ನೋಡಿದ್ದೇನೆ.

6. 3 ನೇ ಆರೋಪಿ ಮೃತ ವಿನೋದ, ಆರೋಪಿ ವಿಶ್ವನಾಥ, ಆರೋಪಿ ಮುನ್ನಾ ಯಾನೇ ಹೇಮಂತ್ ಕೈ ಯಲ್ಲಿ ಮರದ ದೊಣ್ಣೆ ಇತ್ತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಬಲಗಡೆಯಿಂದ 7 ನೇ ಆರೋಪಿಯಾದ ಭೋಜ ನೋಡಿ, ಸದರಿ ಆರೋಪಿಯ ಕೈಯಲ್ಲಿ ಮರದ ದೊಣ್ಣೆ ಇತ್ತು ಎಂದು ನುಡಿಯುತ್ತಾರೆ. ನಮ್ಮ ಮನೆಯಿಂದ 3 ಅಡಿ ದೂರಕ್ಕೆ ನನ್ನನ್ನು ಎತ್ತಿ ಆರೋಪಿತರು ಬಿಸಾಡಿದ್ದಾರೆ. ನನ್ನ ಹೆಂಡತಿ ಚಾಸಾ–2 ಗುಲಾಬಿಗೆ ಮನೆಯ ಒಳಗೆ ಬಿದಿದ್ದರು. ಚಾಸಾ–2 ಗುಲಾಬಿಗೆ ಕೈ ಗೆ, ಹಣೆಗೆ ಪೆಟ್ಟು ಆಗಿತ್ತು ಮತ್ತು ಅವರ ಎರಡೂ ಕಾಲು ಮುರಿದು ಹಾಕಿದ್ದಾರೆ. ಚಾಸಾ–2 ಗುಲಾಬಿಗೂ ಕೂಡ ರಕ್ತಗಾಯ ಆಗಿತ್ತು.

7. ನನ್ನನ್ನು ಆರೋಪಿತರು ಹೊಡೆಯುವಾಗ ನ್ನ ಹೆಂಡತಿ ಚಾಸಾ–2 ಗುಲಾಬಿಗೆ ಮನೆಯ ಒಳಗೆ ಹೊಡೆಯುವುದನ್ನು ನಾನು ನೋಡಿದ್ದೇನೆ. ನನ್ನ ಹೆಂಡತಿ ಚಾಸಾ–2 ಗುಲಾಬಿಗೆ ಮೊದಲು ಆರೋಪಿ ಜಯಂತಿ ಹಲ್ಲೆ ಮಾಡಿದ್ದಾರೆ ನಂತರ ನಿತೇಶ್ ಕುಮಾರ್ ಯಾನೆ ಕುಟ್ಟ, ಮೃತ ವಿನೋದ, ಹರಿ ಹಲ್ಲೆ ಮಾಡಿದ್ದಾರೆ. ರಾತ್ರಿ 9.30 ರವರೆಗೂ ಆರೋಪಿತರು ನಮ್ಮ ಮನೆಯಲ್ಲಿ ಇದ್ದರು. ನನ್ನ ಹೆಂಡತಿ ಚಾಸಾ–2 ಗುಲಾಬಿಗೆ ಮುಂದಿನ ಎಲ್ಲಾ ಹಲ್ಲುಗಳು ಮುರಿದು ಹೋಗಿದೆ.

8. ನಾವು ಆಸ್ಪತ್ರೆಯಿಂದ ಒಂದು ತಿಂಗಳ ನಂತರ ಬಂದಾಗ ಪೊಲೀಸರು ನಮ್ಮ ಮನೆಗೆ ಬಂದಿದ್ದರು. ಮು.ಮಾ-1 ರಿಂದ 4 ಮರದ ದೊಣ್ಣೆಯನ್ನು ಪೊಲೀಸರಿಗೆ ನಾವೇ ಕೊಟ್ಟಿದ್ದೇವೆ. ಮು.ಮಾ-5 ಮತ್ತು 6 ನ್ನು ಘಟನೆಯ ಮರು ದಿನ ಪೊಲೀಸರಿಗೆ ಕೊಟ್ಟಿದ್ದೇವೆ. ನನ್ನ ಹೊಟ್ಟೆಗೆ ಶಸ್ತ್ರ ಚಿಕಿತ್ಸೆ ಆಗಿದೆ.

(ಮಧ್ಯಂತರ ಅವಧಿಯಾದ ಕಾರಣ ಪಾಟೀ ಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು).

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಮತ್ತು ವಿಶೇಷ ನ್ಯಾಯಾಧೀಶರು**
**ದ.ಕ. ಮಂಗಳೂರು**

**ಸಾಕ್ಷಿಗೆ ಪುನಃ ಮಧ್ಯಾಹ್ನ 3.25 ಗಂಟೆಗೆ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 1, 2, 4 ರಿಂದ 7 ಮತ್ತು 9 ಮತ್ತು 10 ನೇ ಆರೋಪಿ ಪರ ಶ್ರೀಮತಿ ಎನ್.ಕೆ ವಕೀಲರಿಂದ**

9. ನನ್ನನ್ನು ಆರೋಪಿತರು ಮನೆಯಿಂದ ಹೊರಗೆ ಬಿಸಾಡಿ ಅರ್ಧ ಗಂಟೆಯ ನಂತರ ನಮ್ಮ ಪಕ್ಕದ ಮನೆಯವರು ತಕ್ಷೀರು ಸ್ಥಳಕ್ಕೆ ಬಂದಿದ್ದಾರೆ. 3 ಜನ ತಕ್ಷೀರು ಸ್ಥಳಕ್ಕೆ ಬಂದಿದ್ದಾರೆ. ಚಾಸಾ–3 ನಾಗಮ್ಮ, ಚಾಸಾ–4 ಪೂವಪ್ಪ, ಚಾಸಾ–5 ಕೃಷ್ಣಪ್ಪ ತಕ್ಷೀರು ಸ್ಥಳಕ್ಕೆ ಬಂದಿದ್ದಾರೆ. ಚಾಸಾ–3 ನಾಗಮ್ಮ ambulance ಗೆ ಫೋನ್ ಮಾಡಿ ಕರೆದಿದ್ದಾರೆ. ಫೋನ್ ಮಾಡಿ 10–20 ನಿಮಿಷದ ಒಳಗೆ ambulance ಸ್ಥಳಕ್ಕೆ ಬಂದಿದೆ.

10. Ambulance ನಲ್ಲಿ ನಾನು ಮತ್ತು ನನ್ನ ಹೆಂಡತಿ ಚಾಸಾ–2 ಗುಲಾಬಿ ಆಸ್ಪತ್ರೆಗೆ ಹೋಗಿದ್ದೇವೆ, ನಮ್ಮ ಜೊತೆ ಯಾರು ಬರಲಿಲ್ಲ. ನನಗೆ ತುಂಬಾ ಪೆಟ್ಟು ಆಗಿದ್ದರಿಂದ ಎಷ್ಟು ಗಂಟೆಗೆ ಆಸ್ಪತ್ರೆಗೆ ತಲುಪಿದ್ದೇವೆ ಎಂದು ನನಗೆ ಸಮಯ ನೋಡಲು ಆಗಲಿಲ್ಲ. ನಾನು ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇರಲಿಲ್ಲ. ನನಗೆ 3–4 ದಿನದವರೆಗೂ ಪ್ರಜ್ಞೆ ಇರಲಿಲ್ಲ. ಈ ಪ್ರಕರಣದ ಬಾಬ್ತು ನಾನು ಪೊಲೀಸ್ ಠಾಣೆಗೆ ಹೋಗಿಲ್ಲ. ನಮ್ಮ ಮನೆಯ ಸುತ್ತ ಮುತ್ತ ದೂರದಲ್ಲಿ ಮನೆಗಳು ಇದೆ. ನಮ್ಮ ಮನೆಯಿಂದ ದೂರದಲ್ಲಿ 3–4 ಮನೆಗಳು ಇದೆ.

11. "ನಾಯಿದ ಮಗ, ಬೋಳಿ ಮಗ" ಎಂದು ಆರೋಪಿತರು ಬೈದಿದ್ದಾರೆ ಎಂದು ಹೇಳಿಕೆ ಕೊಡುವಾಗ ನಾನು ಹೇಳಿಲ್ಲ. ಯಾರ್ಯಾರು ನನಗೆ ಏನು ಹಲ್ಲೆ ಮಾಡಿದ್ದಾರೆ ಎಂದು ನಾನು ಪೊಲೀಸರಿಗೆ ಹೇಳಿಕೆ ಕೊಡುವಾಗ ಹೇಳಿದ್ದೇನೆ. ನಡೆಯಲಾಗಿದೆ ಎಂದು ಹೇಳುವ ಘಟನೆಯ 3–4 ತಿಂಗಳ ಹಿಂದೆ ಆರೋಪಿತರಿಗೆ ಹಲಸಂದೆ ಬೆಳೆಯಲು ಜಾಗ ಕೊಟ್ಟಿದ್ದೆ. 10–15 ಗುಂಡಿ ಮಾಡಿ ಆರೋಪಿತರು ಹಲಸಂದೆ ಗಿಡ ಹಾಕಿದ್ದರು. ಸದರಿ ಜಾಗದಲ್ಲಿ ಹಲಸಂದೆ ಗಿಡ ಮಾತ್ರ ಇತ್ತು, ಬೇರೆ ಗಿಡ ಇರಲಿಲ್ಲ.

12. ನಮ್ಮ ಇನ್ನೊಂದು ಮನೆಯಲ್ಲಿ ನಿಂಗಪ್ಪ ಬಸಪ್ಪ ಅವರು ವಾಸ ಇರಲಿಲ್ಲ, ಘಟನೆಯ ನಂತರ ನಮಗೆ ಸಹಾಯ ಮಾಡಲು ನಿಂಗಪ್ಪ ಬಸಪ್ಪ ನಮ್ಮ ಮನೆಗೆ ಬರುತ್ತಿದ್ದರು. ಘಟನೆಯ ಮೊದಲು

ಒಂದೊಂದು ಬಾರಿ ನಿಂಗಪ್ಪ ಬಸಪ್ಪ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ನಮ್ಮ ಇನ್ನೊಂದು ಮನೆಯಲ್ಲಿ ನಿಂಗಪ್ಪ ಬಸಪ್ಪ ಅವರನ್ನು ಇರಿಸಿದ್ದೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಚಾಸಾ-2 ಗುಲಾಬಿ ಅವರ ತಂದೆ ತಾಯಿಗೆ ಒಬ್ಬಳೇ ಮಗಳು ಅವಳಿಗೆ ಸಹೋದರ ಸಹೋದರಿಯರು ಇಲ್ಲ. ನಡೆಯಲಾಗಿದೆ ಎಂದು ಹೇಳುವ ಘಟನೆಯ ಮೊದಲೇ ನನ್ನ ಹೆಂಡತಿ ಚಾಸಾ-2 ಗುಲಾಬಿ ಅವರ ತಾಯಿ ತೀರಿ ಹೋಗಿದ್ದರು.

13. ನಾನು ಮತ್ತು ನನ್ನ ಹೆಂಡತಿ ಚಾಸಾ-2 ಗುಲಾಬಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದಾಗ ನಮ್ಮನ್ನು ನೋಡಿ ಕೊಳ್ಳಲು ನಮ್ಮ ಜೊತೆ ಯಾರು ಇರಲಿಲ್ಲ. ನನಗೆ ನಡೆದಾಡಲು ಆಗುತ್ತಿರಲಿಲ್ಲ ಆದ್ದರಿಂದ ಆಸ್ಪತ್ರೆಯಲ್ಲಿ ನನ್ನ ಹೆಂಡತಿ ಚಾಸಾ-2 ಗುಲಾಬಿ ನನಗೆ ಸಹಾಯ ಮಾಡಲು ನನ್ನ ಜೊತೆ ಅವಳಿಗೆ ಪೆಟ್ಟು ಆಗಿದ್ದರು ಕೂಡ ಇದ್ದರು. ನನ್ನ ಹೆಂಡತಿ ಚಾಸಾ-2 ಗುಲಾಬಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ 10 ದಿನ ಇದ್ದರು. ಆಸ್ಪತ್ರೆಯಲ್ಲಿ ನಮ್ಮನ್ನು ನೋಡಿಲು ಯಾರು ಬಂದಿಲ್ಲ.

14. ನನ್ನ ಹೆಂಡತಿ ಚಾಸಾ-2 ಗುಲಾಬಿ ಮತ್ತು 1 ನೇ ಆರೋಪಿ ಕೃಷ್ಣಪ್ಪ ನಾಯಕನ ಹೆಂಡತಿಯ ನಡುವೆ ಜಾಗದ ವಿಷಯಕ್ಕೆ ಸಂಬಂಧಪಟ್ಟಂತೆ ಕರಾರು ಆಗಿಲ್ಲ. ಸಾಕ್ಷಿಗೆ ನಿಪಿ-2(ಎ) ಸಹಿಯನ್ನು ತೋರಿಸಿದಾಗ ಸದರಿ ಸಹಿ ತನ್ನದೆ ಎಂದು ನುಡಿದಿರುತ್ತಾರೆ. ನನಗೆ ಓದಲು, ಬರೆಯಲು ಬರುವುದಿಲ್ಲ ಓದಿದವರು ನನಗೆ ಸಹಿ ಮಾಡಲು ಕಲಿಸಿದ್ದಾರೆ. ನಾನು ಮತ್ತು ನನ್ನ ಹೆಂಡತಿ ಚಾಸಾ-2 ಗುಲಾಬಿ ಶಾಲೆಗೆ ಹೋಗಿಲ್ಲ. ನನ್ನ ಜಾಗಕ್ಕೆ ಲಗತ್ತಾಗಿರಿವ ಕುಂಮ್ಕು ಜಾಗಕ್ಕೆ ಆರೋಪಿತರೊಂದಿಗೆ ಕರಾರು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ನೀವು ಮತ್ತು ನಿಮ್ಮ ಹೆಂಡತಿ ಚಾಸಾ-2 ಗುಲಾಬಿ ಕ್ರಯದ ಕರಾರು ಒಪ್ಪಂದ ಮಾಡಿಕೊಂಡು ಆರೋಪಿತರಿಂದ ರೂ.2,45,000/- ಹಣವನ್ನು ಪಡೆದುಕೊಂಡಿದ್ದಿರ ಎಂದರೆ ಸಾಕ್ಷಿ ನಾನು ತೋಟದಲ್ಲಿ ಬೋರ್ವೆಲ್ ಹಾಕಿಸುತ್ತಿದ್ದಾಗ ಸಾಲವಾಗಿ ಆರೋಪಿತರಿಂದ ರೂ.2,20,000/- ಹಣವನ್ನು ಪಡೆದುಕೊಂಡಿದ್ದೆ ಆದರೆ ಜಾಗದ ಮಾರಾಟಕ್ಕೆ ಕ್ರಯ ಮಾಡಿಕೊಂಡಿದ್ದು ಹಣ ಪಡದಿಲ್ಲ ಎಂದು ನುಡಿಯುತ್ತಾರೆ. ಎರಡು ವರ್ಷದ ಹಿಂದೆ ರೂ.2,20,000/- ಹಣವನ್ನು ಆರೋಪಿತರಿಂದ ಸಾಲವಾಗಿ ಪಡೆದಿದ್ದೆ. ಸಾಲದ ಹಣವನ್ನು ಯಾವ ರೂಪದಲ್ಲಿ ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ.

15. ಆರೋಪಿತರಿಂದ ನಾನು ಮೋಸದಲ್ಲಿ ಪಡೆದುಕೊಂಡ ಹಣವನ್ನು ವಾಪಸ್ಸು ಕೊಡಲು ತಪ್ಪಿಸಿಕೊಳ್ಳಲುಈ ಸುಳ್ಳು ಪ್ರಕರಣವನ್ನು ಅವರ ಮೇಲೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯದಲ್ಲಿ ಹಲವಾರು ಬಾರಿ ಪೊಲೀಸ್ ಠಾಣೆಯಲ್ಲಿ ರಾಜಿ ಪಂಚಾಯ್ತಿ ಆಗಿದ್ದು ನಾನು ಆರೋಪಿತರಿಗೆ ಹಣವನ್ನು ವಾಪಸ್ಸು ಕೊಡುವುದಾಗಿ ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ವಿಷಯದಲ್ಲಿ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಅ.ಕ್ರ ನಂಬರ್ 87/24 ದಾಖಲಾಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

16. ಮು.ಮಾ–1 ರಿಂದ 4 ಮರದ ದೊಣ್ಣೆಯನ್ನು ಅಡುಗೆ ಮಾಡಲು ನಾವು ಉಪಯೋಗಿಸುತ್ತೇವೆ, ಸದರಿ ದೊಣ್ಣೆಗಳು ನಮ್ಮ ಮನೆಯಲ್ಲಿ ಇತ್ತು ಅದನ್ನು ಎತ್ತಿಕೊಂಡು ಬಂದು ಬಳಸಿದ್ದಾರೆ. ಮು.ಮಾ–1 ರಿಂದ 4 ನ್ನು ಈ ಪ್ರಕರಣಕ್ಕೊಸರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಘಟನೆ ನಡೆಯದಿದ್ದರೂ ಆರೋಪಿತರ ಮೇಲಿನ ದ್ವೇಷದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 8 ನೇ ಆರೋಪಿ ಪರ ಶ್ರೀ ಯು.ಕೆ.ವೈ ವಕೀಲರಿಂದ</u>**

1, 2, 4 ರಿಂದ 7 ಮತ್ತು 9 ಮತ್ತು 10 ನೇ ಆರೋಪಿತರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಪ್ರಾರ್ಥಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಮತ್ತು ವಿಶೇಷ ನ್ಯಾಯಾಧೀಶರು**
**ದ.ಕ. ಮಂಗಳೂರು**